ಪ-330 (111)

**<u>ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಪ್ರದೀಪ್ ಶೆಟ್ಟರ್ ಮತ್ತು ಶ್ರೀ ಎಸ್.ರವಿಕುಮಾರ್, ಇವರುಗಳು ನಿಯಮ 330ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ</u>**

ಕಿತ್ತೂರು ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಪುರಾತನ ಕಾಲದ ಪ್ರವಾಸಿ ತಾಣಗಳು ಹಾಗೂ ಪುರಾತನ ದೇವಾಲಯಗಳು ಹೆಚ್ಚಾಗಿದ್ದು, ಈ ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು ಹಾಗೂ ಕೆಲವೊಂದು ತಾಣಗಳು ಶಿಥಿಲಾವಸ್ಥೆಯಲ್ಲಿದ್ದು, ಇವುಗಳ ಜೀರ್ಣೋದ್ಧಾರಕ್ಕಾಗಿ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಹೆಚ್ಚಿನ ಅನುದಾನವನ್ನು ಕಿತ್ತೂರು ಕರ್ನಾಟಕ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಿಗೆ ಮೀಸಲಿಟ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತೆ ಮಾನ್ಯ ಪ್ರವಾಸೋದ್ಯಮ ಸಚಿವರೊಂದಿಗೆ ಚರ್ಚಿಸಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

*****

**ಕಿತ್ತೂರು ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಪುರಾತನ ಕಾಲದ ಪ್ರವಾಸಿ ತಾಣಗಳು ಹಾಗೂ ಪುರಾತನ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿರುತ್ತದೆ:-**

ಕಿತ್ತೂರು ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಪುರಾತತ್ವ ನೆಲೆಗಳು, ಸ್ಮಾರಕಗಳು, ಶಿಲಾಶಾಸನಗಳನ್ನು ಒಳಗೊಂಡ ಒಟ್ಟಾರೆ 314 ಸ್ಮಾರಕಗಳು ರಾಜ್ಯ ಸಂರಕ್ಷಿತ ಸ್ಮಾರಕಗಳು ಹಾಗೂ 276 ಸ್ಮಾರಕಗಳು ರಾಷ್ಟ್ರೀಯ ಸಂರಕ್ಷಿತ ಸ್ಮಾರಕಗಳನ್ನು ಪಟ್ಟಿ ಮಾಡಲಾಗಿದೆ.

ಪಟ್ಟದಕಲ್ಲು ಸ್ಮಾರಕಗಳ ಸಮೂಹವು ವಿಶ್ವಪರಂಪರೆ ಪಟ್ಟಿಗೆ ಸೇರ್ಪಡೆ ಮಾಡಲಾಗಿದ್ದು, 2020-21ನೇ ಸಾಲಿನಲ್ಲಿ ಐಹೊಳೆ, ಬಾದಾಮಿ ಪ್ರದೇಶದಲ್ಲಿನ ಸ್ಮಾರಕಗಳ ಸಮೂಹಗಳನ್ನು ವಿಶ್ವ ಪರಂಪರೆ ಅಂತಿಮ ಪಟ್ಟಿ ಸೇರ್ಪಡೆಗೆ ಡೋಸಿಯರ್ ಮತ್ತು ಸೈಟ್ ಮ್ಯಾನೇಜ್ ಮೆಂಟ್ ಪ್ಲಾನ್ ಅನ್ನು ಸಿದ್ಧಪಡಿಸಿ ಸನ್ಮಾನ್ಯ ಮುಖ್ಯಮಂತ್ರಿಗಳ ಶಿಫಾರಸ್ಸಿನೊಂದಿಗೆ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಪರಿಶೀಲನೆಗೆ ಜನವರಿ 2021ರಲ್ಲಿ ಸಲ್ಲಿಸಲಾಗಿದ್ದು, ಇದು ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಪರಿಶೀಲನೆಯಲ್ಲಿದ್ದು, ತದನಂತರ ವಿಶ್ವಪರಂಪರೆ ಪಟ್ಟಿ ಆಯ್ಕೆ ಸಮಿತಿಯ ಪರಿಶೀಲನೆಗೆ ಸಲ್ಲಿಸಲಿದೆ.

ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಸ್ಮಾರಕಗಳ ಅಭಿವೃದ್ಧಿಗಾಗಿ ಸರ್ಕಾರವು ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರವನ್ನು 2018ರಲ್ಲಿ ರಚನೆ ಮಾಡಲಾಗಿದ್ದು, ಸದರಿ ಪ್ರಾಧಿಕಾರವು ಈ ಪ್ರದೇಶಗಳಲ್ಲಿನ ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳಲಿದೆ.

ಕಿತ್ತೂರು ಪ್ರದೇಶದ ವ್ಯಾಪ್ತಿಯಲ್ಲಿನ ಸ್ಮಾರಕಗಳ ಅಭಿವೃದ್ಧಿಗಾಗಿ ಸರ್ಕಾರವು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರವನ್ನು 2011-12ನೇ ಸಾಲಿನಲ್ಲಿ ರಚನೆ ಮಾಡಲಾಗಿದ್ದು, ಸದರಿ ಪ್ರಾಧಿಕಾರವು ಈ ಪ್ರದೇಶಗಳಲ್ಲಿನ ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುತ್ತಿದೆ.

ಇಲಾಖೆಯ ವತಿಯಿಂದ 50ಕ್ಕೂ ಹೆಚ್ಚು ರಾಜ್ಯ ಸ್ಮಾರಕಗಳ ಜೀರ್ಣೋದ್ಧಾರವನ್ನು ಕೈಗೊಳ್ಳಲಾಗಿರುತ್ತದೆ. ಇನ್ನುಳಿದ ಸ್ಮಾರಕಗಳ ಸಂರಕ್ಷಣೆಯನ್ನು ಇಲಾಖೆಗೆ ಲಭ್ಯವಾಗುವ ಅನುದಾನಕ್ಕನುಗುಣವಾಗಿ ಹಂತ ಹಂತವಾಗಿ ಕೈಗೊಳ್ಳಲಾಗುವುದು.

2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 309 ರಲ್ಲಿನ ಘೋಷಣೆಯನ್ವಯ ಇಲಾಖೆಯ ಒಟ್ಟಾರೆ 844 ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಮಾಡಿ ಡಿಜಿಟಲ್ ದಾಖಲೀಕರಣ ಕಾರ್ಯವನ್ನು ರೂ.64.91ಲಕ್ಷಗಳ ವೆಚ್ಚದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು, ಇವರ ಸಹಯೋಗದೊಂದಿಗೆ ದಿನಾಂಕ:04.10.2019ರಂದು ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಗಿದೆ. ಇದರಲ್ಲಿ 2019-20ನೇ ಸಾಲಿನಲ್ಲಿ ಬೆಂಗಳೂರು ವಿಭಾಗದ 105 ಸ್ಮಾರಕಗಳ ಮತ್ತು 2020-21ನೇ ಸಾಲಿನಲ್ಲಿ ಮೈಸೂರು ವಿಭಾಗದ 125

ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಪೂರ್ಣಗೊಂಡಿದೆ. 2021-22 ನೇ ಸಾಲಿನಲ್ಲಿ ಕಲಬುರಗಿ ವಿಭಾಗದ 249 ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಕಾರ್ಯವು ಪ್ರಗತಿಯಲ್ಲಿದೆ. 2022-23ನೇ ಸಾಲಿನಲ್ಲಿ ಬೆಳಗಾವಿ ವಿಭಾಗದಡಿಯಲ್ಲಿನ 365 ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಕಾರ್ಯವು ಪೂರ್ಣಗೊಳ್ಳಲಿದೆ.

ಕರ್ನಾಟಕ ರಾಜ್ಯದಲ್ಲಿ ಅರಕ್ಷಿತ ಸ್ಮಾರಕಗಳ ದಾಖಲೀಕರಣ ಯೋಜನೆಯನ್ನು ಗ್ರಾಮವಾರು ಸಮೀಕ್ಷೆಯ ಮೂಲಕ ಕೈಗೊಳ್ಳುತ್ತಿದ್ದು, ಈ ಕಾರ್ಯವು ಪ್ರಗತಿಯಲ್ಲಿದ್ದು, ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಕಿತ್ತೂರು ಕರ್ನಾಟಕ ವ್ಯಾಪ್ತಿಯಲ್ಲಿನ ವಿಜಯಪುರ ಜಿಲ್ಲೆಯ ಕೊಟ್ಟೂರು, ಹಾವೇರಿಯ ಸವಣೂರು ಮತ್ತು ಬೈಲಹೊಂಗಲಗಳಲ್ಲಿ ನಡೆಯುತ್ತಿದೆ, ರಾಜ್ಯದಲ್ಲಿನ ಎಲ್ಲಾ ತಾಲ್ಲೂಕುಗಳಲ್ಲಿ ಗ್ರಾಮವಾರು ಸರ್ವೇ ಮತ್ತು ದಾಖಲೀಕರಣ ಕಾರ್ಯವು ಪೂರ್ಣಗೊಂಡ ನಂತರ ನಿರ್ದಿಷ್ಟವಾಗಿ ಅರಕ್ಷಿತ ಸ್ಮಾರಕಗಳ ಚಿತ್ರಣವು ಸಹ ಲಭ್ಯವಾಗಲಿದೆ.

ಮೇಲ್ಕಂಡ ಯೋಜನೆಗಳು ಪೂರ್ಣಗೊಂಡ ನಂತರ ಸ್ಮಾರಕಗಳ ವಸ್ತುಸ್ಥಿತಿ ಆಧಾರದ ಮೇರೆಗೆ ಸ್ಮಾರಕಗಳ ಜೀರ್ಣೋದ್ಧಾರಕ್ಕೆ ವಿಸ್ತೃತವಾದ ಯೋಜನಾ ವರದಿಯನ್ನು ಸಿದ್ಧಪಡಿಸಿಕೊಂಡು ರಾಜ್ಯ ಹಾಗೂ ಕೇಂದ್ರ ಸಂಸ್ಕೃತಿ ಮಂತ್ರಾಲಯಕ್ಕೆ ಅನುದಾನದ ಬೇಡಿಕೆಯ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗುವುದು.

**ಕಿತ್ತೂರು ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಪುರಾತನ ಕಾಲದ ಪ್ರವಾಸಿ ತಾಣಗಳು ಹಾಗೂ ಪುರಾತನ ದೇವಾಲಯಗಳ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ:-**

ಕಿತ್ತೂರು ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಬರುವ ಪುರಾತನ ಕಾಲದ ಪ್ರವಾಸಿ ತಾಣಗಳು ಹಾಗೂ ಪುರಾತನ ದೇವಾಲಯಗಳ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ಯಾತ್ರಿನಿವಾಸ/ಡಾರ್ಮಿಟರಿ, ಸಂಪರ್ಕ ರಸ್ತೆ ಅಭಿವೃದ್ಧಿ, ಪಾತ್ ವೇ, ಕರ್ಬ್ಸ್, ಉದ್ಯಾನವನ, ಪರಗೋಲ, ಆಸನಗಳ ವ್ಯವಸ್ಥೆ, ಸ್ನಾನಗೃಹ, ಶೌಚಾಲಯ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಮೆಟ್ಟಿಲುಗಳು ಮತ್ತು ರೈಲಿಂಗ್ಸ್ ಅಳವಡಿಕೆ, ಸೂಚನಾಫಲಕಗಳ ಅಳವಡಿಕೆ, ಪಾರ್ಕಿಂಗ್ ವ್ಯವಸ್ಥೆ ಇನ್ನು ಮುಂತಾದ ಪ್ರವಾಸಿ ಸೌಲಭ್ಯಗಳನ್ನು ಇಲಾಖೆಯು ಗುರುತಿಸಿರುವ ಪ್ರವಾಸಿ ತಾಣಗಳು ಹಾಗೂ ಧಾರ್ಮಿಕ ಸ್ಥಳಗಳ ಬಳಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇಲಾಖೆಯು ಗುರುತಿಸಿರುವ ಪ್ರವಾಸಿ ತಾಣಗಳ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಕಿತ್ತೂರು ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ 2021-22ನೇ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಅಡಿಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಕೈಗೊಂಡಿರುವ ಪ್ರವಾಸಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಗಳ ಜಿಲ್ಲಾವಾರು ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟು ಕಾಮಗಾರಿ ಸಂಖ್ಯೆ | ಅಂದಾಜು ಮೊತ್ತ | ಮಾರ್ಚ್ 2021ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | 2021-22ನೇ ಸಾಲಿನಲ್ಲಿ ಕಾಯ್ದಿರಿಸಿರುವ ಅನುದಾನ |
|---|---|---|---|---|---|
| 1 | ಬೆಳಗಾವಿ | 56 | 3308.34 | 1878.25 | 827.09 |
| 2 | ಉತ್ತರ ಕನ್ನಡ | 32 | 3384.94 | 1403.58 | 729.08 |
| 3 | ಧಾರವಾಡ | 26 | 1800.34 | 1067.83 | 382.75 |

| | | | | | |
|---|---|---|---|---|---|
| 4 | ಗದಗ | 22 | 1028.22 | 722.97 | 94.25 |
| 5 | ಹಾವೇರಿ | 15 | 699.05 | 340.00 | 144.05 |
| 6 | ಬಾಗಲಕೋಟೆ | 23 | 1091.79 | 573.57 | 99.47 |
| 7 | ವಿಜಯಪುರ | 49 | 3765.23 | 1728.50 | 317.45 |
| | **ಒಟ್ಟು** | **223** | **15077.9** | **7714.7** | **2594.14** |

ಕಿತ್ತೂರು ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ 2021-22ನೇ ಕಿತ್ತೂರು ಕರ್ನಾಟಕ ಜಿಲ್ಲೆಗಳಲ್ಲಿ ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸುಗಳಡಿ ಪ್ರವಾಸಿಗರ ಅನುಕೂಲಕ್ಕಾಗಿ ಕೈಗೊಂಡಿರುವ ಪ್ರವಾಸಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಗಳ ಘೋಷ್ವಾರೆ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟು ಕಾಮಗಾರಿ ಸಂಖ್ಯೆ | ಅಂದಾಜು ಮೊತ್ತ | ಮಾರ್ಚ್ 2021ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | 2021-22ನೇ ಸಾಲಿನಲ್ಲಿ ಕಾಯ್ದಿರಿಸಿರುವ ಅನುದಾನ |
|---|---|---|---|---|---|
| 1 | ಬೆಳಗಾವಿ | 9 | 2199.05 | 1112.67 | 436.38 |
| 2 | ಉತರ ಕನ್ನಡ | 5 | 1548.55 | 1239.84 | 209.24 |
| 3 | ಧಾರವಾಡ | 0 | 0.00 | 0.00 | 0.00 |
| 4 | ಗದಗ | 1 | 285.00 | 200.00 | 0.00 |
| 5 | ಹಾವೇರಿ | 1 | 164.00 | 100.00 | 64.00 |
| 6 | ಬಾಗಲಕೋಟೆ | 3 | 3825.75 | 1862.75 | 0.00 |
| 7 | ವಿಜಯಪುರ | 3 | 1740.00 | 740.00 | 0.00 |
| | **ಒಟ್ಟು** | **22** | **9762.35** | **5255.26** | **709.62** |

**TOR 361 TDV 2021**

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ
ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು

# ಅನುಬಂಧ
## (ಗಮನ ಸೆಳೆಯುವ ಸೂಚನೆ-೩೩೦)

## ಬೆಳಗಾವಿ ವಿಭಾಗದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ 2020-25 ರ ಕರ್ನಾಟಕ ಪ್ರವಾಸೋದ್ಯಮ ನೀತಿಯಡಿ ಗುರುತಿಸಿರುವ ಪ್ರವಾಸಿ ತಾಣಗಳ ವಿವರ

| ಕ್ರ. ಸಂ | ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು | ತಾಣಗಳ ಸಂಖ್ಯೆ |
|---|---|---|---|---|
| 1 | ಬೆಳಗಾವಿ | ಬೆಳಗಾವಿ | ರಾಮತೀರ್ಥ, ರಾಜಹಂಸಘಡ, ನವಿಲು ತೀರ್ಥ<br>ಕಮಲ ಬಸದಿ, ಶ್ರೀ ರಾಮಕೃಷ್ಣ ಆಶ್ರಮ, ಬೆಳಗಾವಿ ಕೋಟೆ, ವೀರಸೌಧ, ಕಾಂಗ್ರೆಸ್ ಭಾವಿ, ಸೂಳೇಭಾವಿ, ಕಾಕತಿ, ಉಚ್ಚಗಾವ್, ಕೌರಿಗುಡ್ಡ, ಬಸವನ ಕುಡಚಿ | 13 |
| | | ಬೈಲಹೊಂಗಲ | ಕಿತ್ತೂರು, ದೇವಾಮ್/ದೇಗಾವಿ<br>ಸಂಗೊಳ್ಳಿ, ಹನಬರಹಟ್ಟಿ, ದೇಶನೂರು, ಬೆಳವಾಡಿ. | 6 |
| | | ಸವದತ್ತಿ | ಸವದತ್ತಿ, ಮಲಪ್ರಭ ಅಣೆಕಟ್ಟು<br>ಹೂಲಿ, ಸವದತ್ತಿ ಕೋಟೆ, ಪರಸಘಡ, ದೊಡ್ಡವಾಡ, ಚಚಡಿ, ಮುನವಳ್ಳಿ, ಶಿರಸಂಗಿ. | 9 |
| | | ಗೋಕಾಕ್ | ಗೋಕಾಕ ಜಲಪಾತ, ಗೊಡಚನಮಲ್ಕಿ ಜಲಪಾತ, ಧೂಪದಾಳ<br>ಅರಭಾವಿ, ಸೂಣದೋಳ್ಳಿ, ಉದಗಟ್ಟಿ, ಕೂಲಗೊಡ, ಮಸಗುಪ್ಪಿ, ಕಲ್ಲೋಳ್ಳಿ, ಯೋಗಿಕೊಳ್ಳ, ಕೊಣ್ಣೂರ, ಧೂಪದಾಳ, ಸಾವಳಗಿ, ಅಂಕಲಗಿ. | 13 |
| | | ಖಾನಾಪುರ | ಹಲಸಿ<br>ನಂದಗಡ, ವಜ್ರಪೋಹ ಜಲಪಾತ, ಸುರಾಲು ಜಲಪಾತ, ಕಾಸಮಳಗಿ, ಅಸೋಗಾ, ಜಾಂಬೋಟಿ, ನಾಗರಗಾಳಿ, ಪರವಾಡ, ಚೋರ್ಲಾ, ಗಾವಲಿ, ಕಕ್ಕೇರಿ, ಕೃಷ್ಣಾಪುರ | 13 |
| | | ರಾಮದುರ್ಗ | ಶಬರಿ ವ್ಯಾಲಿ, ನಿಡಸೋಸಿ<br>ದೊಡ್ಡಮಾಲೂರು ಗುಡ್ಡ, ಅಶೋಕವನ, ಗೊಡಚಿ, ತೊರಗಲ್ ಕೋಟೆ, ಮುದಕವಿ. | 7 |
| | | ಹುಕ್ಕೇರಿ | ಘಟಪ್ರಭ<br>ಜೋಡುಗುಮ್ಮಟ (ನಿಡಸೋಸಿ), ಮುದಗ, ಸೊನ್ನಟ್ಟಿ, ಹಿಡಕಲ ಅಣೆಕಟ್ಟು, ಸಂಕೇಶ್ವರ, ಯಮಕನಮರಡಿ, ದಡ್ಡಿ, ಬಡಕುದ್ರಿ, ಅಮ್ಮಣಗಿ, ಹತ್ತರಗಿ. | 11 |

| ಕ್ರ ಸಂ | ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು | ತಾಣಗಳ ಸಂಖ್ಯೆ |
|---|---|---|---|---|
| | | ರಾಯಭಾಗ | ಚಿಂಚಲಿ, ಮುಗಳಖೋಡ, ಕುಡಚಿ, ಅಲಕನೂರು, ಸವಸುದ್ದಿ, ಹಾರೂಗೇರಿ, ಯಲ್ಪಾರಟ್ಟಿ, ಪರಮಾನಂದವಾಡಿ, ರಾಮಘಟ್ಟ. | 9 |
| | | ಅಥಣಿ | ಅಥಣಿ, ಕೊಕಟನೂರ, ಸಪ್ತಸಾಗರ, ಸತ್ತಿ, ಖೀಳೆಗಾಂವ್, ಮಂಗಸೂಳಿ, ಕಾಗವಾಡ, ರಾಮತೀರ್ಥ. | 8 |
| | | ಚಿಕ್ಕೋಡಿ | ಸಂಡೂರು, ನಿಪ್ಪಾಣಿ, ಸ್ತವನಿಧಿ, ಪರಟಿ, ಆಡಿ, ಯಕ್ಸಂಬಾ, ಕೊಥಳಿ, ಕೇರೂರು, ಸದಲಗಾ, ಯಡೂರು, ನೇಜ್. | 11 |
| 2 | ಬಾಗಲ ಕೋಟೆ | ಬಾಗಲಕೋಟೆ | ಮುಚಕಂಡಿಕೆರೆ, ಸಿಮಿಕೇರಿ-ಲಡ್ಡುಮುತ್ತಾ | 2 |
| | | ಹುನಗುಂದ | ಐಹೊಳೆ, ಕೂಡಲಸಂಗಮ | 2 |
| | | ಬಾದಾಮಿ | ಬಾದಾಮಿ, ಪಟ್ಟದಕಲ್ಲು, ಮಹಾಕೂಟ | 3 |
| | | ಬೀಳಗಿ | ಚಿಕ್ಕಸಂಗಮ | 1 |
| | | ಜಮಖಂಡಿ | ಕಟ್ಟಿಕೆರೆ | 1 |
| 3 | ವಿಜಯಪುರ | ವಿಜಯಪುರ | ಗೋಲಗುಂಬಜ ಮತ್ತು ಇಬ್ರಾಹಿಂ ರೋಜಾ, ತೊರವಿ<br>ಕನಮಡಿ, ಜಾಲಗೇರಿ ಮುಮ್ಮಟ್ಟಿ ಗುಡ್ಡ, ದ್ಯಾಬೇರಿ, ಕುಮಟಗಿ, ಉಪ್ಪಲದಿನ್ನಿ, ಹರಳಯ್ಯನ ಗುಂಡ, ಶೇಗುಣಶಿ, ತಿಕೋಟ. | 11 |
| | | ಬಸವನ ಬಾಗೇವಾಡಿ | ಬಸವನ ಬಾಗೇವಾಡಿ, ಆಲಮಟ್ಟಿ ಆಣೆಕಟ್ಟು<br>ಇಂಗಳೇಶ್ವರ | 3 |
| | | ಮುದ್ದೇಬಿಹಾಳ | ಯಲಗೂರು, ತಂಗಡಗಿ, ಕೋಳೂರು. | 3 |
| | | ಇಂಡಿ | ಹೊರ್ತಿ, ಹಿರೇರೂಗಿ, ಸಾಲೋಟಗಿ, ಹಲಸಂಗಿ. | 4 |
| | | ಸಿಂದಗಿ | ಯಂಕಂಚಿ, ದೇವರಹಿಪ್ಪರಗಿ, ಚಟ್ಟರಕಿ, ಕಡ್ಲೆವಾಡ. | 4 |
| 4 | ಧಾರವಾಡ | ಧಾರವಾಡ | ನೃಪತುಂಗ ಬೆಟ್ಟ, ಸಾಧನಕೆರೆ<br>ಕೆಲಗೇರಿ, ಪ್ರಾದೇಶಿಕ ವಿಜ್ಞಾನ ಕೇಂದ್ರ, ನುಗ್ಗಿಕೆರೆ, ಶಾಲ್ಮಲಾ ನದಿ ಉಗಮ ಸ್ಥಾನ, "ನೇಚರ ಫಸ್ಟ್- ಇಕೋ ವಿಲೇಜ್". | 7 |
| | | ಹುಬ್ಬಳ್ಳಿ | ವರೂರು, ಸಂಜೀವಿನಿ ಉದ್ಯಾನವನ.<br>ಉಣಕಲ್ ಕೆರೆ, ಕೆಂಪಕೆರೆ | 4 |

| ಕ್ರ ಸಂ | ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು | ತಾಣ ಗಳ ಸಂಖ್ಯೆ |
|---|---|---|---|---|
| | | ನವಲಗುಂದ | ನವಲಗುಂದ<br>ಕೋಳಿವಾಡ, ಯಮನೂರು | 3 |
| | | ಕಲಘಟಗಿ | ನೀರಸಾಗರಕೆರೆ | 1 |
| | | | | |
| 5 | ಗದಗ | ಗದಗ | ಗದಗ, ಭೀಷ್ಮಕೆರೆ, ಲಕ್ಕುಂಡಿ<br>ಬಿಂಕದಕಟ್ಟಿ ಪ್ರಾಣಿ ಸಂಗ್ರಹಾಲಯ, ಕಪ್ಪತಗುಡ್ಡ | 6 |
| | | ನರಗುಂದ | ನರಗುಂದ<br>ಕೊಣ್ಣೂರು | 2 |
| | | ಮುಂಡರಗಿ | ಸಿಂಗಟಾಲೂರು<br>ಡಂಬಳ, ಹಮ್ಮಿಗಿ-ಕೊರ್ಲಹಳ್ಳಿ ಬ್ಯಾರೇಜ್ | 3 |
| | | ಶಿರಹಟ್ಟಿ | ಮಾಗಡಿ (ಬರ್ಡ್ ಸ್ಯಾಂಚುರಿ) | 1 |
| | | ರೋಣ | | 0 |
| | | | | |
| 6 | ಹಾವೇರಿ | ಹಾವೇರಿ | ಗಳಗನಾಥ, ಕರ್ಜಗಿ, ಹಳೆ ಕಿತ್ತೂರ, ಹೊಸರಿತ್ತಿ | 4 |
| | | ಶಿಗ್ಗಾಂವ್ | ಶಿಗ್ಗಾಂವ್, ಬಾಡ, ಶಿಶುನಾಳ<br>ಬಂಕಾಪುರ ನವಿಲು ಧಾಮ | 4 |
| | | ಹಿರೇಕೆರೂರ | ಅಬಲೂರು | 1 |
| | | ಬ್ಯಾಡಗಿ | ಕಾಗಿನೆಲೆ<br>ಕದರಮಂಡಲಗಿ | 2 |
| | | ಹಾನಗಲ್ | ಹಾನಗಲ್ | 1 |
| | | ಸವಣೂರು | ಸವಣೂರು | 1 |
| | | ರಟ್ಟಿಹಳ್ಳಿ | ರಟ್ಟಿಹಳ್ಳಿ, ಕಣವಿ ಸಿದ್ದಗೇರಿ, ಹಳ್ಳೂರು, ಗುಡ್ಡದ ಮಾದಾಪುರ | 4 |
| | | ರಾಣೆಬೆನ್ನೂರು | ಚೌಡಧಾನಾಪುರ, ಕೃಷ್ಣ ಮೃಗಧಾಮ, ದೇವರಗುಡ್ಡ, ಗುಡಿ ಹೊನ್ನತ್ತಿ | 4 |
| | | | | |

| ಕ್ರ ಸಂ | ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು | ತಾಣಗಳ ಸಂಖ್ಯೆ |
|---|---|---|---|---|
| 7 | ಉತ್ತರ ಕನ್ನಡ | ಕಾರವಾರ | ಕಾರವಾರ, ಕುರುಮಗಡ, ಅಂಜದೀವ್ ದ್ವೀಪ್, ದೇವಗಡ<br>ಶೇಜವಾಡ, ತಿಲಮಾತಿ ಕಡಲತೀರ | 6 |
| | | ಜೋಯಿಡಾ | ಉಳವಿ, ರಾಮನಗರ, ಕ್ಯಾಸಲ್ ರಾಕ್ | 3 |
| | | ಯಲ್ಲಾಪೂರ | ಯಲ್ಲಾಪುರ, ಮಾಗೋಡು ಜಲಪಾತ, ಲಾಲಗೂಳಿ ಜಲಪಾತ<br>ಸಾಥೋಡ್ಡಿ ಜಲಪಾತ. | 4 |
| | | ಹಳಿಯಾಳ | ಹಳಿಯಾಳ, ದಾಂಡೇಲಿ, ದಾಂಡೇಲಿ ವನ್ಯಜೀವಿ ಧಾಮ, ಅಂಬಿಕಾ ನಗರ ಪವರ ಸ್ಟೇಷನ್<br>ಹಳಿಯಾಳ ಕೋಟೆ | 5 |
| | | ಸಿದ್ದಾಪುರ | ಸಿದ್ದಾಪುರ, ಉಂಚಳ್ಳಿ ಜಲಪಾತ | 2 |
| | | ಶಿರಸಿ | ಶಿರಸಿ, ಸೋಂದ, ಬನವಾಸಿ<br>ಶಿವಗಂಗಾ ಜಲಪಾತ | 4 |
| | | ಕುಮಟಾ | ಕುಮಟಾ, ಗೋಕರ್ಣ, ಯಾಣ, ಧಾರೇಶ್ವರ, ಓಂ ಕಡಲತೀರ, ರವೀಂದ್ರನಾಥ ಟ್ಯಾಗೋರ್ ಮತ್ತು ದೇವಭಾಗ ಕಡಲತೀರ<br>ಮಿರ್ಜಾನ ಕೋಟೆ, ಕೂಡ್ಲ ಕಡಲತೀರ | 8 |
| | | ಅಂಕೋಲಾ | ಅಂಕೋಲಾ<br>ವಿಭೂತಿ ಜಲಪಾತ | 2 |
| | | ಭಟ್ಕಳ | ಭಟ್ಕಳ, ಮುರುಡೇಶ್ವರ | 2 |
| | | ಹೊನ್ನಾವರ | ಬಸವರಾಜ ದುರ್ಗ, ಇಡುಗುಂಜಿ, ಕಾಸರಗೋಡು ಕಡಲುತೀರ | 3 |
| | | ಮುಂಡಗೋಡ | ಅತ್ತಿವೇರಿ ಪಕ್ಷಿಧಾಮ | 1 |
| | | | | 222 |